ಕರ್ನಾಟಕ ವಿಧಾನ ಸಭೆ

ಸೋಮವಾರ 29ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು:- (ಶ್ರೀ. ವಿ.ಎಸ್. ಕೌಜಲಗಿ)ಅವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆ

ಬದನವಾಳು ಗ್ರಾಮದಲ್ಲಿ ಹರಿಜನರ ಕಗ್ಗೊಲೆ

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ನಾವು ತಮ್ಮ ಅಪ್ಪಣೆಯನ್ನು ಪಡೆದುಕೊಂಡು..

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ... ಬದನವಾಳು ಗ್ರಾಮದ ಘಟನೆಯ ಬಗ್ಗೆ...

ಶ್ರೀ ಆರ್.ವಿ. ದೇಶಪಾಂಡೆ:- ಬದನವಾಳು ಗ್ರಾಮದಲ್ಲಿ ನಡೆದ ಘಟನೆಯ ಬಗ್ಗೆ ಪ್ರಸ್ತಾಪ ಮಾಡಲು ತಮ್ಮ ಅನುಮತಿಯನ್ನು ಪಡೆದಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಬಗ್ಗೆ ಯಾರ್ಯಾರು ನೋಟೀಸ್ ಕೊಟ್ಟಿದ್ದಾರೆ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರು ದಯವಿಟ್ಟು ತಿಳಿಸಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ಇದೊಂದು ನೀಚಕೃತ್ಯ. ಇದು ಕೇವಲ ಬದನವಾಳುವಿನಲ್ಲಿ ಮಾತ್ರವಲ್ಲ, ಇಡೀ ರಾಜ್ಯದಲ್ಲಿ ಅಲ್ಲಲ್ಲಿ ನಡೆಯುತ್ತಾ ಇದೆ. ಮೈಸೂರು ಜಿಲ್ಲೆಯಲ್ಲಿ 2-3 ಘಟನೆಗಳು ಆಗಿವೆ. ಈ ಬಗ್ಗೆ ಸರಕಾರದವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ, ಇಂಥ ಘಟನೆಗಳನ್ನು ತಪ್ಪಿಸಲು ಸರಕಾರದವರು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇವೊತ್ತು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇರಬೇಕಾಗಿತ್ತು. ನಾವು ಅವರಿಲ್ಲದೆ ಪ್ರಸ್ತಾಪ ಮಾಡಿದರೆ ನೀವುಗಳು ಯಾರಾದರೂ ಸಿ.ಎಂ.ರವರು ಬರಲಿ ಅವರು ಉತ್ತರ ಕೊಡುತ್ತಾರೆ ಎಂದು ಹೇಳುವುದು ಬೇಡ ಎಂದು ಅವರು ಇದ್ದರೆ ನಾವು ಪ್ರಸ್ತಾಪ ಮಾಡುವುದು ಉಚಿತ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಯವರು ಡೆಲ್ಲಿಯಿಂದ ಬಂದ ತತ್‌ಕ್ಷಣ ಅವರು ಆ ಸ್ಥಳಕ್ಕೆ ಹೋಗಿದ್ದಾರೆ. ಇನ್ನು ಒಂದು ಅರ್ಧಘಂಟೆಯ ಒಳಗಾಗಿ ಸದನಕ್ಕೆ ಅವರು ಬರಲಿದ್ದಾರೆ. ಒಂದು ವೇಳೆ ಅವರು ಅಲ್ಲಿಗೆ ಹೋಗಿಲ್ಲ ಅಂದರೆ ಏಕೆ ಹೋಗಿಲ್ಲ ಎಂದು ನೀವೆ ಕೇಳುತ್ತೀರಿ? ಅವರ ಸದ್ಭಾವನೆಗಳನ್ನು ತಾವುಗಳು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಅವರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಆದರೆ ಅವರು ಬರುವವರೆಗೆ ಸರಕಾರ ಇದೆಯೇ ಇಲ್ಲವೇ ಎಂಬ ವಿಚಾರ ನಮ್ಮದು.

ಶ್ರೀ ಎಸ್. ಎಂ. ಕೃಷ್ಣ:- ಮಾನ್ಯ ಮುಖ್ಯಮಂತ್ರಿಯವರು ಅಲ್ಲಿ ಪರಿಸ್ಥಿತಿಯನ್ನು ನೋಡಿಕೊಂಡು ಬರುತ್ತಾರೆ, ನೀವುಗಳು ಕೂಡ ಹೋಗಿ ನೋಡಿಕೊಂಡು ಬಂದಿದ್ದೀರಿ. ಹಾಗೆ ಅವರು ಬಂದಮೇಲೆ ಚರ್ಚೆ ಮಾಡುವುದರಲ್ಲಿ ಏನೂ ತೊಂದರೆಯಿಲ್ಲವಲ್ಲ? ಮುಖ್ಯಮಂತ್ರಿಗಳು ಬಂದ ಮೇಲೆ ಸರಕಾರ ಈ ವಿಚಾರದಲ್ಲಿ ಸವಿವರವಾದ ಚರ್ಚೆಗೆ ಸಿದ್ಧವಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದ ವಿಚಾರ ಸರಿಯಾಗಿದೆ, ಆದರೆ ಇದೊಂದು ಗಂಭೀರವಾದ ಸಮಸ್ಯೆಯಾಗಿದ್ದು ಇವೊತ್ತು ನಾವು ಈ ವಿಚಾರವನ್ನು ಬಿಟ್ಟು ಬೇರೆ ವಿಚಾರಗಳನ್ನು ಸದನದಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಏಕೆಂದರೆ ಜನಗಳು ನಾಳೆ ನಮ್ಮ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ? ಒಂದು ವೇಳೆ ಮುಖ್ಯಮಂತ್ರಿಯವರು ಬಂದ ಮೇಲೆ ಚರ್ಚೆಯಾಗಬೇಕು ಅಂದರೆ ಅರ್ಧಗಂಟೆಕಾಲ ಹೌಸ್‌ನ್ನು ಅಡ್‌ಜರ್ನ್ ಮಾಡಿ ನಂತರ ಅವರು ಬಂದಮೇಲೆ ಚರ್ಚೆ ಮಾಡೋಣ. ಇವೊತ್ತು ಈ ವಿಷಯ ಚರ್ಚೆಯಾದ ನಂತರ ಅದಕ್ಕೆ ಸರಕಾರದಿಂದ ಸರಿಯಾದ ಉತ್ತರ ಬಂದಿಲ್ಲಂತರ, ತಾವುಗಳು ಬೇರೆ ವಿಷಯವನ್ನು ತೆಗೆದುಕೊಳ್ಳಲು ನಮ್ಮ ಅಡ್ಡಿ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅಲ್ಲಿನ ಘಟನೆಗಳ ಬಗ್ಗೆ ಏನು ಹೇಳಿಕೆ ಕೊಡುತ್ತಾರೋ ಅದನ್ನು ಕೊಡಲಿ. ಈ ಘಟನೆ ನಡೆದುದು 25ನೇ ತಾರೀಖು. ಅಲ್ಲಿ ಮೂರು ಜನ ದಲಿತರ ಅಮಾನುಷ ಕೊಲೆಯಾಗಿದೆ. ಇದೊಂದು ಹೇಯ ಮತ್ತು ಬರ್ಬರ ಕೃತ್ಯವಾಗಿದೆ. ಇಂಥ ಒಂದು ಗಂಭೀರವಾದ ಘಟನೆ ನಡೆದಿರುವಾಗ ಸರಕಾರ ಇದರ ಬಗ್ಗೆ ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಇದು ಕೇವಲ ಆ ಊರಿಗೆ ಸೀಮಿತವಾದ ಘಟನೆಯಲ್ಲ. ಇತ್ತೀಚೆಗೆ ರಾಜ್ಯದಲ್ಲಿ ದಲಿತರ ಮೇಲೆ ಈ ರೀತಿಯ ಹಲ್ಲೆಗಳು ಸಾಮಾನ್ಯವಾಗಿದೆ. ಅವರಿಗೆ ರಕ್ಷಣೆ ಇಲ್ಲದಿರುವಂಥ ವಿಚಿತ್ರವಾದ ಪರಿಸ್ಥಿತಿಯು ಇರುವಾಗ, ಇವೊತ್ತು ಮಾನವ ಜನಾಂಗವೇ ತಲೆತಗ್ಗಿಸ ಬೇಕಾದಂಥ ಹೇಯಕೃತ್ಯ ಇದಾಗಿದ್ದು, ಇಂಥ ಸಂದರ್ಭದಲ್ಲಿ ಇದರ ಬಗ್ಗೆ ಸರಕಾರದವರು ತೆಗೆದುಕೊಂಡ ಕ್ರಮಗಳು ಏನು? ಎಷ್ಟು ಜನರನ್ನು ಬಂಧಿಸಿದ್ದೀರಿ? ಅಲ್ಲಿ ವಾತಾವರಣ ಯಾವರೀತಿಯಲ್ಲಿದೆ? ನಮ್ಮ ಪಕ್ಷದ ವತಿಯಿಂದ ಲೋಕಸಭಾ ಸದಸ್ಯರಾದ ಧನಂಜಯ ಕುಮಾರ್‌ರವರ ನೇತೃತ್ವದಲ್ಲಿ ಶಾಸಕರು ಹೋಗಿ ಬಂದಿದ್ದಾರೆ. ವಿರೋಧಿಪಕ್ಷದ ನಾಯಕರು ಮುಂತಾಗಿ ಎಲ್ಲರೂ ಅಲ್ಲಿಗೆ ಹೋಗಿ ಬಂದಿದ್ದಾರೆ. ವಿಷಯ ಪತ್ರಿಕೆಗಳಲ್ಲಿ ಬಂದಿದ್ದು ಸರಕಾರದಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳು ಇವೆ. ಪೋಲೀಸರ ನಿರ್ಲಕ್ಷ್ಯದಿಂದ ಈ ಘಟನೆಯು ಮುಂದುವರಿಯಿತು. ಎರಡು-ಮೂರು ಘಂಟೆಗಳ ಮೇಲೆ ಅವರು ಸ್ಥಳಕ್ಕೆ ಬಂದರು ಎಂಬ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇದರ ಬಗ್ಗೆ ಸರಕಾರದವರು ಏನೇನು ಕ್ರಮ ತೆಗೆದುಕೊಂಡಿದ್ದಾರೆ? ಮುಖ್ಯಮಂತ್ರಿಗಳು ಆ ಮೇಲೆ ಬಂದು ವಿವರಗಳನ್ನು ಕೊಡಲಿ. ಈಗ ಚರ್ಚೆ ಪ್ರಾರಂಭವಾಗಲಿ.

ಶ್ರೀ ವಾಟಾಳ್ ನಾಗರಾಜ್:- ಮೈಸೂರು ಜಿಲ್ಲೆಯಲ್ಲಿ ಯಾರೂ ಹೇಳುವವರು, ಕೇಳುವವರು ಇಲ್ಲದ ಹಾಗೆ ಆಗಿದೆ. ಇಡೀ ಜಿಲ್ಲೆಯ ಅಡಳಿತವೇ ಕುಸಿದು ಹೋಗಿದೆ. ನಾನು ಅಲ್ಲಿಗೆ ಹೋಗಿ ಬಂದಿದ್ದೇನೆ. ಅಲ್ಲಿ ಗಂಭೀರ ಪರಿಸ್ಥಿತಿಯು ಇದೆ. ಮೈಸೂರು ಜಿಲ್ಲೆಯಲ್ಲಿ ಒಂದು ರೀತಿಯ ಭಯೋತ್ಪಾದನೆಯ ವಾತಾವರಣವು ನಿರ್ಮಾಣವಾಗಿದೆ. ಅಲ್ಲಿನ [illegible] ಕಾರಿವರ್ಗ ಸಂಪೂರ್ಣವಾಗಿ ನಿಲ್ [illegible]ದ್ದಾರೆ. ಅಲ್ಲಿ ಶಾಂತಿಪಾಲನೆ ಎಲ್ಲಿಯೂ ಇಲ್ಲ, ಹಳ್ಳಿ [illegible] ಇದು ನಡೆಯುತ್ತಾ ಇದೆ. ಬದನವಾಳುವಿಗೆ ಮಹಾತ್ಮಾ ಗಾಂಧೀಯವರು ಕೂಡ ಬಂದು ಹೋದ [illegible]ದೆ. ಇಂಥ ಘಟನೆ ಅಲ್ಲಿ ನಡೆದುದರ ಹಿನ್ನಲೆ ಏನು? ಅಧಿಕಾರಿಗಳ ಬೇಜವಾಬ್ದಾರಿ ಏನು? ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ:- ನಾವು ನಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇವೆ. ಬಹಳ ಜನರು ಈ ಬಗ್ಗೆ ಮಾತನಾಡುವುದಕ್ಕೆ ಕೇಳಬಹುದು. ಹಾಗಾಗಿ ಸಮಯ ಆಗುತ್ತದೆ. ತಾವು ಈ ಬಗ್ಗೆ ಅನುಮತಿ ಕೊಟ್ಟರೆ ನಾವು ಪ್ರಾರಂಭ ಮಾ [illegible]ತ್ತೇವೆ.

ಅಧ್ಯಕ್ಷರು:- ನನ್ನ ಒಂದು ಸಲಹೆ ಇದೆ. ವಿಷಯವು ಗಾಂಭೀರ್ಯದಿಂದ ಇರುವುದರಿಂದ ತಾವುಗಳು ಪ್ರಸ್ತಾಪ ಮಾಡುತ್ತೀರಿ ಹಾಗೂ ಈ ಕಡೆಯವರು ಕೂಡ ಮಾತನಾಡಬಹುದು. ಆದ್ದರಿಂದ 2-3 ಗಮನ ಸೆಳೆಯುವ ಸೂಚನೆಗಳು ಇವೆ, ಅವುಗಳನ್ನು ತೆಗೆದುಕೊಂಡ ನಂತರ ತಾವುಗಳು ಪ್ರಸ್ತಾಪ ಮಾಡಿದರೆ, ಹೆಚ್ಚು

ಅನುಕೂಲವಾಗುತ್ತದೆ. ಅಷ್ಟರಲ್ಲಿ ಮುಖ್ಯಮಂತ್ರಿಯವರು ಬಂದರೆ, ಅವರು ಕೇಳಿದರ ಹೇಳಲು ಅನುಕೂಲವಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಈ ವಿಷಯದ ಗಾಂಭೀರ್ಯ ಇನ್ನು ಜಾಸ್ತಿಯಾಗುತ್ತದೆ.

ಅಧ್ಯಕ್ಷರು:- ನಾನು ಅವಕಾಶವನ್ನು ಮಾಡಿಕೊಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:- ತಾವು ಅವಕಾಶವನ್ನು ಮಾಡಿಕೊಡುತ್ತೀರಿ, ತಾವು ಏನು ಸಲಹೆ ಕೊಟ್ಟಿದ್ದೀರಿ ಅದಕ್ಕೆ ವಿರುದ್ಧ ನಾವು ಇಲ್ಲ. ಆದರೆ ಈ ವಿಷಯದ ಗಾಂಭೀರ್ಯವನ್ನು ನಾವು ತಿಳಿದುಕೊಂಡ ಮೇಲೆ, ಬೇರೆ ವಿಷಯ ಇವತ್ತು ಚರ್ಚೆಯಾದರೆ ಒಳ್ಳೆಯದಲ್ಲ, ಇದೇ ವಿಷಯ ಮೊದಲು ಚರ್ಚೆಯಾಗಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಇದಕ್ಕೆ ಆದ್ಯತೆಯನ್ನು ಕೊಡೋಣ.

ಶ್ರೀ ಆರ್.ವಿ. ದೇಶಪಾಂಡೆ:- ಆದ್ಯತೆಯನ್ನು ಕೊಟ್ಟು ಮಾಡಬೇಕು. ಅದಕ್ಕೋಸ್ಕರ ನಾನು ಹೇಳಿದೆ. ಮುಖ್ಯಮಂತ್ರಿಯವರು ಬರುವವರೆಗೆ ಸಭೆಯನ್ನು ಮುಂದಕ್ಕೆ ಹಾಕಿ. ಈ ವಿಷಯದ ಚರ್ಚೆಯಾದ ನಂತರ ಬೇರೆ ವಿಷಯವನ್ನು ತೆಗೆದುಕೊಳ್ಳುವುದು ಸರಿ ಎಂದು ನನ್ನ ಸಲಹೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಅದನ್ನೆ ಪುನಃ ತಾವು ಹೇಳಬೇಕಾಗುತ್ತದೆ. ಏಕೆಂದರೆ ಅದು ಮಹತ್ವವಾದ ವಿಷಯವಾಗಿರುವುದರಿಂದ ಅವರು ಬಂದ ಮೇಲೂ ತಾವು ಹೇಳಬೇಕಾಗುತ್ತದೆ. ಆದ್ದರಿಂದ ಎರಡು ಸಾರಿ ಹೇಳುವುದರ ಬದಲಾಗಿ ಈಗ ಗಮನ ಸೆಳೆಯುವ ಸೂಚನೆಯನ್ನು ಮಾಡಿದ ಮೇಲೆ ತೆಗೆದುಕೊಂಡರೆ ಒಳ್ಳೆಯದು. ಅದರ ಮಹತ್ವ ಕಡಿಮೆಯಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರೆ, ಒಂದು ಅರ್ಧ ಗಂಟೆಯ ಮೇಲೆ ವಿಷಯವನ್ನು ಪ್ರಸ್ತಾಪನೆ ಮಾಡಿದರೆ ಖಂಡಿತವಾಗಿಯೂ ಇದರ ಮಹತ್ವ ಎಳ್ಳಷ್ಟು ಕಡಿಮೆಯಾಗುವುದಿಲ್ಲ. ಈ ಸಭೆಯ ಎಲ್ಲಾ ಪಕ್ಷದ ಜನರು ಸಹ ಹೇಳುತ್ತಿದ್ದಾರೆ.

Sri. R.V. Deshapande:- Everybody has to condemn this. Let me be very frank. Politicise, politicking ಇಲ್ಲಿ ರಾಜಕೀಯವನ್ನು ಮಾಡುವುದಕ್ಕೆ ನಮಗೆ ಇಂಟರೆಸ್ಟ್ ಇಲ್ಲ. ನಾವು ಪಕ್ಷಾತೀತವಾಗಿ ಇದನ್ನು ಖಂಡನೆ ಮಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಸರ್ಕಾರ ಏನು ಮಾಡುತ್ತಿದೆ ಅಂತ ಕೇಳಬೇಕಾಗಿದೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್:- ಮೂರು ಜನರ ಹತ್ಯೆಯನ್ನು ಮಾಡಿದ್ದಾರೆ. ಈಗಾಗಲೇ ನಮ್ಮ ರಾಜ್ಯದ ಗೃಹಮಂತ್ರಿಗಳು ಸಹ ಅಲ್ಲಿಗೆ ಭೇಟಿಯನ್ನು ಕೊಟ್ಟು ಬಂದಿದ್ದಾರೆ. ವಿರೋಧ ಪಕ್ಷದ ಎಲ್ಲಾ ನಾಯಕರು ಭೇಟಿಯನ್ನು ಕೊಟ್ಟಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಕೂಡ ಭೇಟಿಯನ್ನು ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಬರುವುದರೊಳಗೆ ಮಾನ್ಯ ಗೃಹಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಅನ್ನಾದರೂ ಕೊಡಲಿ.

ಶ್ರೀ ಕರಿಯಣ್ಣ:- ಎಲ್ಲರಿಗೂ ಇದರ ಬಗ್ಗೆ ದುಃಖವಾಗಿದೆ. ನಾವು ಸಹಿತ ಈ ವಿಚಾರದ ಬಗ್ಗೆ ಮಾತನಾಡಬೇಕಾಗಿದೆ. ಆದ್ದರಿಂದ ಸರ್ಕಾರ ಸಹಿತ ಇದಕ್ಕೆ ಏನು ವಿರುದ್ಧ ಇಲ್ಲ ಅಂತ ಕಾಣುತ್ತದೆ. ಏಕೆಂದರೆ ಯಾವುದೇ ವಿಷಯ ಪಕ್ಷಾತೀತವಾಗಿದ್ದು ಅದರ ಬಗ್ಗೆ ಮಾತನಾಡುವುದರಿಂದ ಯಾರೂ ವಿರುದ್ಧ ಇಲ್ಲ ಅಂತ ಕಾಣುತ್ತದೆ. ಎಲ್ಲರಿಗೂ ಸಹಿತ ಇದರ ಬಗ್ಗೆ ಕಳಕಳಿ ಇದೆ. ನಮ್ಮ ವಿರೋಧ ಪಕ್ಷದ ನಾಯಕರು ಹೋಗಿ ನೋಡಿಕೊಂಡು ಬಂದಿದ್ದಾರೆ. ನಮ್ಮ ಕಡೆಯ ಜನಗಳು ಸಹಿತ ನೋಡಿಕೊಂಡು ಬಂದಿದ್ದಾರೆ. ಆದರೆ

ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದಾಗ ಮಾತನಾಡಿದರೆ ಏನು ಮಾಡಬೇಕು ಎನ್ನತಕ್ಕದ್ದು, ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕದ್ದು ಆಗುತ್ತದೆ. ಅವರು ಬಂದಮೇಲೆ ಶುರುಮಾಡಿದರೆ ಉತ್ತಮವೆಂದು ನನಗೆ ಅನ್ನಿಸುತ್ತದೆ. ನಾವು ಅದರ ಬಗ್ಗೆ ಮಾತನಾಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಶೂನ್ಯ ವೇಳೆಯಲ್ಲಿ ಮತ್ತೊಂದು ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ನಿಮ್ಮ ಅನುಮತಿಯನ್ನು ಕೋರಿದ್ದೆ.

ಅಧ್ಯಕ್ಷರು:- ನಾನು ಕೊಡುತ್ತೇವೆ, ಇದನ್ನು ಮುಗಿಸಿದ ನಂತರ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಬದನವಾಳು ಗ್ರಾಮದ ಘಟನೆಯ ಬಗ್ಗೆ ಮುಖ್ಯಮಂತ್ರಿಗಳು ಬರಬೇಕೆಂದು ಸರ್ಕಾರದವರು ಬಯಸಿರುವುದರಿಂದ ಅದರ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಈಗ ಸರ್ಕಾರದ ವಕ್ತಾರರು ಇದ್ದಾರೆ, ಉಪಮುಖ್ಯಮಂತ್ರಿಗಳು ಇದ್ದಾರೆ. ಕೊಂಕಣ ರೈಲ್ವೆಯ ಕೆಲಸ ಬಗ್ಗೆ, ಪ್ರಸ್ತಾಪ ಮಾಡಿ ಮುಗಿಸೋಣ. ಬೇಕಾದರೆ ಮುಖ್ಯಮಂತ್ರಿಗಳು ಬಂದಾಗ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಮತ್ತು ಮಾನ್ಯ ಸಿಂಧ್ಯರವರು ತಮ್ಮ ಕೊಠಡಿಗೆ ಬಂದು ಕೊಂಕಣ ರೈಲ್ವೆಯ ಕೆಲಸ ಏನು ನಿಂತಿದೆ ಇದರ ಬಗ್ಗೆ ಪ್ರಸ್ತಾಪ ಮಾಡಬೇಕು ಅದಕ್ಕೆ ತಾವು ಅನುಮತಿಯನ್ನು ಕೊಡುವುದಕ್ಕೆ ತಾವು ಒಪ್ಪಿಕೊಂಡಿದ್ದೀರಿ, ಇದರ ಬಗ್ಗೆ ಚರ್ಚೆಗೆ ಆಮೇಲೆ ಅವಕಾಶ ಕೊಡುತ್ತೇವೆಂದು ಹೇಳಿದ್ದೀರಿ ಪರವಾಗಿಲ್ಲ.

ಅಧ್ಯಕ್ಷರು:- ನಾಲ್ಕು ಗಮನ ಸೆಳೆಯುವ ಸೂಚನೆ ಇವೆ, ಅವುಗಳನ್ನು ಮುಗಿಸಿದ ನಂತರ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್:- ಕೊಂಕಣದ್ದು ಇದೆ, ಮಂಡ್ಯ ಮತ್ತು ಅನೇಕ ಕಡೆ ಕಾಲರಾ ಬಂದಿರುವ ಬಗ್ಗೆ ತಮಗೆ ಹೇಳಿದ್ದೇವೆ..

ಶ್ರೀ ಕರಿಯಣ್ಣ:- ತಾವು ಮತ್ತೆ ಬೇರೆ ಚರ್ಚೆಯನ್ನು ಎತ್ತಿಕೊಂಡಾಗ ಆ ಚರ್ಚೆ ಪೂರ್ತಿಯಾಗುವ ತನಕ ಈ ಚರ್ಚೆಗೆ ಬರುವುದಿಲ್ಲ ಅಂದರೆ ಈ ವಿಚಾರ ಅಲ್ಲಿಗೆ ನಿಂತು ಬಿಡುತ್ತದೆ. ಇದು ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿದೆ. ಯಾವುದೇ ಚರ್ಚೆ ಇದ್ದರೂ ಮಾನ್ಯ ಮುಖ್ಯಮಂತ್ರಿಗಳು ಬಂದತಕ್ಷಣ ಅದನ್ನು ಅಲ್ಲಿಗೆ ಮೊಟಕುಗೊಳಿಸಿ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ:- ತಾಳೆಎಣ್ಣೆ ಉತ್ಪಾದಿಸುವ ಘಟಕವನ್ನು ಪ್ರಾರಂಭಿಸುವಲ್ಲಿ ತಡವಾಗುತ್ತಿರುವುದರಿಂದ ರೈತರಿಗೆ ಆಗುತ್ತಿರುವ ತೊಂದರೆ

ಶ್ರೀ ಎಂ.ಎಸ್. ಆತ್ಮಾನಂದ:- ತಾಳೆಎಣ್ಣೆ ಉತ್ಪಾದನಾ ಘಟಕವನ್ನು ಪ್ರಾರಂಭಿಸುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ನಾಗಮ್ಮ ಕೇಶವಮೂರ್ತಿ:- ಮಾನ್ಯ ಅಧ್ಯಕ್ಷರೇ, ಪಾಮೆಣ್ಣೆ ಪ್ರದರ್ಶನ ಯೋಜನೆಯನ್ನು ಭಾರತ ಸರ್ಕಾರದ ಬಯೋ ಟೆಕ್ನಾಲಜಿ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯ ಅಡಿಯಲ್ಲಿ ಕೈಗೊಳ್ಳಲಾಗಿದೆ. ಈ ಯೋಜನೆಯ ಪ್ರಕಾರ ಶಿವಮೊಗ್ಗ ಜಿಲ್ಲೆಯ ಈ ಕೆಳಕಂಡ ತಾಲ್ಲೂಕುಗಳಲ್ಲಿ ಅಂದರೆ, ಶಿವಮೊಗ್ಗ, ಭದ್ರಾವತಿ, ಹೊಸ್ನಾಳಿ ಮತ್ತು ಚನ್ನಗಿರಿ ತಾಲ್ಲೂಕುಗಳಲ್ಲಿ 1100 ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಗಿಡಗಳನ್ನು ಬೆಳೆಸಲಾಗುತ್ತಿದೆ. ಪ್ರಥಮ ಕಂತಿನ ತಾಳೆ ಹಣ್ಣುಗಳು ಜೂನ್ 93ರ ಹೊತ್ತಿಗೆ